# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ

# ಬಳ್ಳಾರಿ

## ಸತ್ರ ಮೊಕದ್ದಮೆ ಸಂಖ್ಯೆಃ 43/2025

**ಪಿ.ಡಬ್ಲ್ಯೂಃ3 (ಸಿಡಬ್ಲ್ಯೂಃ 4)**

| | | |
|---|---|---|
| **ಸಾಕ್ಷಿದಾರರ ಹೆಸರು** | : | **ಶ್ರೀ ತಿಕ್ಕಪ್ಪ** |
| **ತಂದೆಯ ಹೆಸರು** | : | **ಗೋಪಾಲಪ್ಪ** |
| **ವಯಸ್ಸು** | : | **40 ವರ್ಷ** |
| **ಕೆಲಸ** | : | **ವ್ಯವಸಾಯ** |
| **ವಾಸ ಸ್ಥಳ** | : | **ರುದ್ರಪಾದ ಗ್ರಾಮ, ಸಿರುಗುಪ್ಪ** |

**ಸಾಕ್ಷಿಯನ್ನು ದಿನಾಂಕ 16.07.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಆರೋಪಿ ಫಕೀರಪ್ಪ ಪರಿಚಯ. ಸದರಿ ಯವರು ನನ್ನನ್ನು ಎಲ್ಲಿಯೂ ಕರೆದುಕೊಂಡು ಹೋಗಿರುವುದಿಲ್ಲ.

**2.** ಈಗ ನನಗೆ ತೋರಿಸಿದ ದಾಖಲೆಯಲ್ಲಿನ ರುಜು ನನ್ನ ರುಜು ಆಗಿದ್ದು ಅದನ್ನು 2 ವರ್ಷಗಳ ಹಿಂದಿನ ದಿನಗಳಲ್ಲಿ ಪೊಲೀಸ್ ಠಾಣೆಯಲ್ಲಿ ಮಾಡಿದ್ದೇನೆ. ಅಮಾನತ್ತು ಮಹಜರ್ ದಾಖಲೆಯಲ್ಲಿ ಸಾಕ್ಷಿ ತನ್ನ ರುಜುವನ್ನು ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ಈಗ **ನಿಪಿ.6** ಎಂದು, ಅದರಲ್ಲಿರುವ ಸಾಕ್ಷಿಯ ರುಜುವನ್ನು **ನಿಪಿ.6(ಎ)** ಎಂದು ಗುರುತಿಸಲಾಯಿತು.

**S.C.No.43/2025**
**P.W.3 (C.W.4 )**
**Date : 16.07.2026**

**3**. ನಕಾಶೆಯಲ್ಲಿ ನನ್ನ ರುಜು ಇದ್ದು ಅದನ್ನು ಸಹ ಪೊಲೀಸರು ಠಾಣೆಯಲ್ಲಿಪಡೆದರು. ನನಗೆ ತೋರಿಸಿದ ಮತ್ತು ನನ್ನ ರುಜು ಇರುವ ನಕಾಶೆಯನ್ನು ಈಗ ನಿಪಿ.7 ಎಂದು, ಅದರಲ್ಲಿರುವ ನನ್ನ ಒಪ್ಪಿಕೊಂಡ ರುಜುವನ್ನು **ನಿಪಿ7(ಎ)** ಎಂದು ಈಗ ಗುರುತಿಸಲಾಯಿತು. ನನಗೆ ತೋರಿಸಿದ ಫೋಟೋ ದಲ್ಲಿ ನಾನು ಇದ್ದೇನೆ. ನನ್ನನ್ನು ಪ್ರತಿಬಿಂಬಿಸಿರುವ ಫೋಟೋ ವನ್ನು ಈಗ **ನಿಪಿ.8** ಎಂದು ಗುರುತಿಸಲಾಯಿತು.

**4.** ಪ್ರಶ್ನಿಸಿದಂತೆ ನನ್ನ ಸಮಕ್ಷಮ ಪೊಲೀಸರು ಆರೋಪಿ ಫಕೀರಪ್ಪನ ಮಾಹಿತಿ ಮೇರೆಗೆ ಈಗ ನನಗೆ ತೋರಿಸಿದ ಮತ್ತು ಈಗಾಗಲೇ ಮುದ್ದೆಮಾಲು 1 ಎಂದು ಗುರುತು ಮಾಡಿದ ವಸ್ತುವನ್ನು ವಶಕ್ಕೆ ಪಡೆದಿಲ್ಲ. ಮುದ್ದೆಮಾಲು 1 ರ ಮೇಲಿನ ರುಜುವನ್ನು ನಾನು ಠಾಣೆಯ ಲ್ಲಿ ಮಾಡಿದ್ದೇನೆ. ನಿಪಿ.6 ರಲ್ಲಿನ ಸಂಗತಿಗಳು ನನಗೆ ಗೊತ್ತಿಲ್ಲ.

***(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಕೋರಿದ್ದು, ಕೋರಿಕೆ ಸಮರ್ಪಕವಾಗಿದ್ದು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲಾಗಿದೆ. )***

**ಪಾಟಿ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

**5.** ದಿಃ26.6.2024 ರಂದು ನನ್ನನ್ನು ಮತ್ತು ಚಾಸಾ.5 ರವರನ್ನು ಆರೋಪಿ ಫಕೀರಪ್ಪನ ಸೂಚನೆ ಮೇರೆಗೆ ಪೊಲೀಸರು ಆರೋಪಿ ತೋರಿಸಿದ ಜಾಗಕ್ಕೆ ನಮ್ಮಗಳನ್ನು ಕರೆದುಕೊಂಡು ಹೋಗಿದ್ದು ಆರೋಪಿ ಫಕೀರಪ್ಪ ಜಮೀನು ಸ್ಥಳದಲ್ಲಿದ್ದ ಮತ್ತು ಈಗ ನನಗೆ ತೋರಿಸಿದ ಮುದ್ದೆಮಾಲು 1 ರ ಕತ್ತಿಯನ್ನು ನಮ್ಮಗಳ ಸಮಕ್ಷಮ ಪೊಲೀಸರಿಗೆ ನೀಡಿದ್ದು, ಆ ಪ್ರಯುಕ್ತ ನಿಪಿ.ೃ6 ರ ಪಂಚನಾಮೆಯನ್ನು ಜರುಗಿಸಿದರಲ್ಲದೇ ನಿಪಿ.7 ರ ನಕಾಶೆಯನ್ನು

ತಯಾರಿಸಿ ನಿಪಿ.8 ರ ಫೋಟೋ ವನ್ನು ಸಹ ತೆಗೆದರು ಎಂದರೆ ಸರಿಯಲ್ಲ. ಮುದ್ದೆಮಾಲು 1 ರ ವಸ್ತುವನ್ನು ಪೊಲೀಸರು ಸೂಚಿಸಿದಂತೆ ತಮ್ಮ ವಶಕ್ಕೆ ನನ್ನ ಸಮಕ್ಷಮ ಪಡೆದಾಗ ನಾನು ಮುದ್ದೆಮಾಲು 1 ರ ಮೇಲಿರುವ ನನ್ನ ರುಜುವನ್ನು ಮಾಡಿದೆ ಎಂದರೆ ಸರಿಯಲ್ಲ. ನಿಪಿ.6 ಸಂಗತಿಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ನಾನು ಅಸತ್ಯ ನುಡಿದೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ:**

**ಇಲ್ಲಃ**

**ಮರು-ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

**ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬಳ್ಳಾರಿ.**